*ನಾನಿಂದು ನೆರಿಯ ಸಿಯೋನ್ ಆಶ್ರಮ ಕ್ಕೆ ಹೋಗಿದ್ದೆ. ಸೌಹಾರ್ದ ಕಾರ್ಯಕ್ರಮ ಕ್ಕೆಂದು ಆಶ್ರಮದವರು ಕರೆದಿದ್ದರು.ನೂರಾರು ಕಾರ್ಯಕ್ರಮಗಳಿಗೆ ಹೋದ ನಾನು  ಕಾರ್ಯಕ್ರಮ ವನ್ನು ಅಷ್ಟೊಂದು ಸೀರಿಯಸ್ಸಾಗಿ ಕಂಡಿರಲಿಲ್ಲ. ಹಾಗಂತ ಅಲ್ಲಿ ಹೋಗಿ ನೋಡಿದರೆ ಕಾರ್ಯಕ್ರಮ ಸಾಮಾನ್ಯವಾಗಿರಲಿಲ್ಲ.ಧರ್ಮಸ್ಥಳ ಕ್ಷೇತ್ರದ ಹರ್ಷೇಂದ್ರ ಕುಮಾರ್ ,ಸುಬ್ರಹ್ಮಣ್ಯ ಕ್ಷೇತ್ರದ ಸ್ವಾಮೀಜಿ ಗಳು, ಇನ್ನಿತರ ಮಹಾನುಭಾವರು ಸೇರಿದ ದೊಡ್ಡ ಕಾರ್ಯಕ್ರಮ ವಾಗಿತ್ತು.ಇರಲಿ ಬಿಡಿ,ಅದೇನೂ ಹೇಳಲೇ ಬೇಕಾದ ಕಾರ್ಯವಲ್ಲ.ಆದರೆ ಹೇಳಲೇ ಬೇಕಾದ ಕಾರ್ಯವೂ ಅಲ್ಲಿತ್ತು.ಪುರುಸೊತ್ತು ಇದ್ದರೆ ಓದಿ ಬಿಡಿ. ಕಾರ್ಯಕ್ರಮ ಆರಂಭವಾಗಿ ಸಂಸ್ಥೆಯ ಮುಖ್ಯಸ್ಥ ರಾದ ಯು.ಸಿ ಪೌಲೋಸ್ ಪ್ರಾಸ್ತಾವಿಕ ಮಾತಿಗೆ ನಿಂತರು.ಅಂಗವಿಕಲರು,ಬುದ್ದಿ ಮಾಂದ್ಯರು, ಮಾನಸಿಕ ವಿಭ್ರಾಂತರು,ಮನೆಯಿಂದ ದೂರ ತಳ್ಳಲ್ಪಟ್ಟವರು,ಬಸ್ಸಿನಲ್ಲಿ ಕೂರಿಸಿ ಹೋದವರ ಪರವಾಗಿ ಬಸ್ ಸಿಬ್ಬಂದಿ ಯೊಂದಿಗೆ ನೇರವಾಗಿ ಆಶ್ರಮಕ್ಕೆ ಬಂದವರು.ಹೀಗೆ ಸುಮಾರು ಮುನ್ನೂರ ಎಂಬತ್ತರಷ್ಟು ಮನುಷ್ಯ ಜೀವಗಳು! ಇಪ್ಪತ್ತು ವರ್ಷದಲ್ಲಿ ಎಂಟುನೂರು ಮಂದಿ ಆರೋಗ್ಯ ಪುನಃ ಪಡೆದು ಕುಟುಂಬದೊಂದಿಗೆ ಸೇರಿಕೊಂಡಿದ್ದಾರೆ.*

*ಈಗ ನಿಮಗೆ ಸಂಸ್ಥೆ ಬಗ್ಗೆ ಒಂದಿಷ್ಟು ಮಾಹಿತಿ ಸಿಕ್ಕಿದಂತಾಯಿತು.ಮುಂದಕ್ಕೆ ಮಾತನಾಡುತ್ತಾ ಶ್ರೀ ಪೌಲೋಸ್ ಸಂಸ್ಥೆ ಹುಟ್ಟುಹಾಕಿದ ಕಾರಣ ವಿವರಿಸಿದಾಗ ಅಲ್ಲಿ ನೆರೆದ ಎಲ್ಲರ ಕಣ್ಣುಗಳು ತೇವಗೊಂಡವು. ಅಸಹಾಯಕರ ಬಗ್ಗೆ ಅವರಿಗೆ ಯಾಕೆ ಈ ರೀತಿಯ ಕಾಳಜಿ ಬಂತು ಎನ್ನುವುದಾಗಿತ್ತು.ತಾಯಿ ಎಲೀ ಅಮ್ಮ ಅವರಿಗೆ  ಸ್ವಲ್ಪ ಬುದ್ದಿಮಾಂದ್ಯತೆ ಇತ್ತು.ಒಮ್ಮೆ ಮನೆಯ ಮೇಲಿಂದ ಇವರು ಎತ್ತಿ ಪೌಲೋಸರನ್ನು ಬಿಸಾಡಿದ್ದರು ಕೂಡಾ.ಅದು ಅಲ್ಲದೇ ಇಬ್ಬರು ಅಕ್ಕಂದಿರನ್ನು ಪೌಲೋಸ್ ಕಳಕೊಂಡಿದ್ದರು.ಕಾರಣ ಇಬ್ಬರು ಚಿಕ್ಕ ಮಕ್ಕಳನ್ನು ಕಪಾಟಿನಲ್ಲಿ ಇಟ್ಟು ಬೀಗ ಹಾಕಿ ತಾಯಿ ಹೋಗಿದ್ದರು.ಮರಳಿ ಬಂದಾಗ ಇಬ್ಬರೂ ಮಕ್ಕಳು ಉಸಿರುಗಟ್ಟಿ ಪ್ರಾಣ ಬಿಟ್ಟಿದ್ದರು.ಇನ್ನು ಆ ತಾಯಿ ಯನ್ನು ನಿಭಾಯಿಸಲು  ಪೌಲೋಸ್ ತುಂಬಾ ಸಾಹಸ ಪಡಬೇಕಾಯಿತು.ತನ್ನ ಪತ್ನಿ ಕೂಡಾ ಸಾಕಷ್ಟು ಸಂಕಟ ಅನುಭವಿಸಿದರು.ಕೆಲವೊಮ್ಮೆ ಗಲೀಜನ್ನು ಮೈ ಮೇಲೆ ಬಿಸಾಡುತ್ತಿದ್ದರು. ಆದರೂ ಮೇರಿ ಪಾಲೋಸ್ ಎದೆಗುಂದಲಿಲ್ಲ ಎಲ್ಲಾ ಸಹಿಸಿದರು.ಇದನ್ನೆಲ್ಲಾ ಅನುಭವಿಸಿದ ಪೌಲೋಸ್ ಇಂತಹ ಬುದ್ದಿಮಾಂದ್ಯ ಜನರನ್ನು ಸಾಕಬೇಕೆಂದು ಕನಸು ಕಂಡರು.ಸ್ವಂತ ಮನೆಯಲ್ಲಿ ಯೇ ಆರಂಭಗೊಂಡ ಸೇವೆ ಈಗ ಬೆಳೆದಿದೆ.ಇದರ ಮಧ್ಯೆ ಕೆಲವೊಮ್ಮೆ ಕಾನೂನಿನ ಬಿಕ್ಕಟ್ಟು, ಮತ್ತು ಮಾಧ್ಯಮದಲ್ಲಿ ಬಂದ ಮತಾಂತರ ಮತ್ತು ಅಸ್ವಾಭಾವಿಕ  ಅನುಚಿತ ಸುಳ್ಳು ವರದಿ ಗೆ ಹೆದರಿ ಸ್ವತಹಾ ಕುಟುಂಬ ಸಮೇತ ಆತ್ಮಹತ್ಯೆಗೂ ಮುಂದಾದ ಸಂಕಷ್ಟದ ದಿನಗಳನ್ನು ನೆನಪಿಸಿದರು.ಆ ಸಂದರ್ಭದಲ್ಲಿ ಸಹಾಯಕ್ಕೆ ನಿಂತ ಕ್ಷೇತ್ರ ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗ್ಗಡೆಯವರ ಬಗ್ಗೆ ಪೌಲೋಸ್ ತುಂಬಾ ಸ್ಮರಿಸಿದರು.ನಂತರ ಕಾರ್ಯಕ್ರಮ ದಲ್ಲಿ ಮಾತಾಡಿ ಆಶ್ರಮದ ಕೊಠಡಿಗಳಿಗೆ ತೆರಳಿದೆವು.ಅಲ್ಲಿಯ ಬುದ್ದಿಮಾಂದ್ಯ ಮಕ್ಕಳೊಂದಿಗೆ,ಕಬ್ಬಿನದ ಸರಪಳಿ ಹಿಂದಿರುವ ಮನುಷ್ಯರೊಂದಿಗೆ,ತಿರಸ್ಕರಿಸಲ್ಪಟ್ಟ ಅಸಹಾಯಕರೊಂದಿಗೆ ಕೆಲವು ಹೊತ್ತು ಕಳೆದು ಹಿಂದುರುಗಿದೆವು.ನಿಜವಾದ  ಸೌಹಾರ್ದ ಅಲ್ಲಿತ್ತು ಯಾಕೆ ಗೊತ್ತಾ?ಅಲ್ಲಿರವವರಲ್ಲಿ ಶೇಕಡಾ ಎಪ್ಪತ್ತರಷ್ಟು ಹಿಂದುಗಳು,ಇಪ್ಪತ್ತರಷ್ಟು ಕ್ರೈಸ್ತರು,ಹತ್ತರಷ್ಟು ಮುಸ್ಲಿಮರು.ಒಟ್ಟಿಗೆ ಬದುಕುತ್ತಿದ್ದಾರೆ.*

*ಮೌಲಾನಾ ಯು ಕೆ ಅಬ್ದುಲ್ ಅಝೀಝ್ ದಾರಿಮಿ ಚೊಕ್ಕ ಬೆಟ್ಟು*